# SPVVS'S

# G. P. PORWAL ARTS, COMMERCE & V. V. SALIMATH SCIENCE COLLEGE SINDGI

## DEPT OF ECONOMICS

## 2022-23

## PROJECT WORK

**Agriculture price policy in India**

- (a) Determination of appropriate price
  - Commission for Agricultural Costs and Prices (CACP)
- (B) Administered price
  - Minimum Support Price-MSP
  - Statutory Minimum Support Price
  - Procurement Price
  - Issue Prices
- (C) Implementation of administered price
  - Responsibility for tasks of Different Agencies
  - National Crop Forecasting Centre (NCFC)
  - High Powered Price Monitoring Board:
  - Buffer Stock
  - Warehousing
  - Regulated market
  - Credit Facility

# Agriculture Price Policy


**Submitted By**

**Ku. Reshma & Shivabai**

**Dept of Economics**

B.Com. I Sem

Reg No: U15NB22C0018

U15NB22C0063

**Submitted to**

**Sri. Basavaraj R. Mahajanashetti**

**Dept of Economics**

**GPP & VVS College Sindgi**



Coordinator IQAC
G. P. PORWAL ARTS, COM &
V. V. SALIMATH Sc. College,
SINDGI-586128.

Principal,
G.P. Porwal Arts, Comm &
V. V. Salimath Sc. College
SINDGI-586128 College Code 5284

SPVVS'S

# G. P. PORWAL ARTS, COMMERCE & V. V. SALIMATH SCIENCE COLLEGE SINDGI - 586 128

## DEPARTMENT OF ECONOMICS

# CERTIFICATE

Register No: **U15NB22C0018**
**U15NB22C0063**

Class: **B.Com. I Sem**

This is to certify that, Mr/Mrs. *Reshma & Shivabai* are satisfactorily completed Project/Seminar work on **"Agriculture Price Policy"** under my supervision in G. P. Porwal Arts, Commerce and V. V. Salimath Science College Sindagi.Year 2022-23

**Sri. Basavaraj R. Mahajanashetti**
**Dept of Economics**
**GPP & VVS College Sindgi**

**HOD**
**Dr. Prakash Rathod**
**Dept of Economics**
**GPP & VVS College Sindgi**

Head
Dept. of Economics
G.P.P. Arts, Commerce & V.V.S. Science
College, SINDAGI-586128.

Coordinator IQAC
G. P. PORWAL ARTS, COM &
V. V. SALIMATH Sc. College
SINDGI-586128

Principal,
G. P. Porwal Arts, Comm &
V. V. Salimath Sc. College
SINDGI-586128. College Code: 5234

# ಪರಿವಿಡಿ


| ಕ್ರ.ಸಂ | ವಿಷಯ | ಪುಟ ಸಂಖ್ಯೆ |
|---|---|---|
| 1 | ಕೃಷಿ ಬೆಲೆ ನೀತಿ | 1-3 |
| ೨ | ಆಹಾರ ದಾನ್ಯಗಳಿಗೆ ಸಂಬಂದಿಸಿದಂತೆ ಬೆಲೆ ನೀತಿ<br>i. ಬೆಂಬಲ ಬೆಲೆ<br>ii. ಸಂಗ್ರಹಣಾ ಬೆಲೆ<br>iii. ಮಾರಾಟ ಬೆಲೆ | 4-[illegible] |

# ಕೃಷಿ ಬೆಲೆ ನೀತಿ

ಕೃಷಿ ಉತ್ಪನ್ನಗಳ ಬೆಲೆಗಳು ತೀಕ್ಷ್ಣವಾದ ಏರಿಳಿತಗಳಿಗೆ ಒಳಗಾಗದಂತೆ ಸ್ಥಿರತೆಯನ್ನು ಸಾಧಿಸುವಿಕೆ, ಬೆಲೆಯ ಮಟ್ಟವನ್ನು ಹತೋಟಿಯಲ್ಲಿಡುವಿಕೆ, ಉತ್ಪನ್ನಗಳಿಗೆ ಯೋಗ್ಯ ಬೆಲೆಯನ್ನು ದೊರಕಿಸಿಕೊಡುವಿಕೆ, ಅನುಭೋಗಿಗಳಿಗೆ ಹೊರೆಯಾಗದಂತಹ ಬೆಲೆಗಳನ್ನು ನಿಗದಿಗೊಳಿಸುವಿಕೆ ಮುಂತಾದವು ಕೃಷಿ ಬೆಲೆ ನೀತಿಯ ವ್ಯಾಪಕ ಉದ್ದೇಶಗಳಾಗಿರುತ್ತವೆ.

**ಬೆಲೆ ನೀತಿ :-** ಬೆಲೆ ನೀತಿ ಎಂದರೆ ಇಲ್ಲಿ ಸರ್ಕಾರವೇ ಅನುಸರಿಸುವಂತಹ ಅಧಿಕೃತ ಧೋರಣೆ ಎಂದರೇ ಕೃಷಿ. ಉತ್ಪನ್ನಗಳ ಬೇಡಿಕೆ ಮತ್ತು ಪೂರೈಕೆಯ ನಡುವೆ ಅಗಾಧ ಅಂತರ ಸಂಭವಿಸಬಹುದಾದ್ದರಿಂದ ಸಾರ್ವತ್ರಿಕ ಬೆಲೆಗಳ ಮಟ್ಟವನ್ನು ನಿಯಂತ್ರಿಸುವ ಸಲುವಾಗಿ ಕೃಷಿ ಉತ್ಪನ್ನಗಳ ಬೆಲೆಗಳಲ್ಲಿ ಸ್ಥಿರತೆಯನ್ನು ಸಾಧಿಸಬೇಕಾಗಿರುವುದರಿಂದ ಮತ್ತು ಕೃಷಿ ಉತ್ಪಾದಕರಿಗೆ ನ್ಯಾಯೋಚಿತ ಬೆಲೆಗಳನ್ನು ದೊರಕಿಸಿಕೊಡಬೇಕಾದ ಅವಶ್ಯಕತೆ ಇರುವುದರಿಂದ ಸರ್ಕಾರವೇ ಮಧ್ಯ ಪ್ರವೇಶಿಸಿ ಬೆಲೆ ನೀತಿಗಳನ್ನು ಘೋಷಿಸಬೇಕಾದ ಅವಶ್ಯಕತೆ ತಲೆದೋರುತ್ತದೆ.

ಕೃಷಿ ಬೆಲೆ ನೀತಿಯ ಪ್ರಮುಖ ಉದ್ದೇಶಗಳು ಕೆಳಗಿನಂತಿವೆ.

1) ಬೇಡಿಕೆ ಮತ್ತು ಪೂರೈಕೆ ಒತ್ತಡಗಳ ಸಮಾನತೆ :-

ಕೃಷಿ ಉತ್ಪನ್ನಗಳ ಬೇಡಿಕೆ ಮತ್ತು ಪೂರೈಕೆಯ ಒತ್ತಡಗಳನ್ನು ಸಮಾನತೆಗೆ ತರುವುದು.

2) ಬೆಲೆಗಳಲ್ಲಿ ಏರಿಳಿತಗಳನ್ನು ತಡೆಗಟ್ಟುವಿಕೆ

ಕೃಷಿ ಉತ್ಪನ್ನಗಳ ಬೆಲೆಗಳಲ್ಲಿ ತೀಕ್ಷ್ಣವಾದ ಏರಿಳಿಕೆಗಳನ್ನು ತಡೆಗಟ್ಟುವುದು.

3) ವಸ್ತುಗಳ ನಡುವೆ ಮತ್ತು ಧಾನ್ಯಗಳ ನಡುವೆ ವಿವೇಚನಾಯುತ ಸಂಬಂಧವನ್ನು ನೆಲೆಗೊಳಿಸುವಿಕೆ.

ಕೃಷಿ ಉತ್ಪನ್ನಗಳ ಮತ್ತು ತಯಾರಿಸಿದ ವಸ್ತುಗಳ ನಡುವೆ ಹಾಗೂ ಆಹಾರಧಾನ್ಯಗಳ ಮತ್ತು ಆಹಾರೇತರ ಧಾನ್ಯಗಳ ನಡುವೆ ವಿವೇಚನಾಯುತವಾದ ಸಂಬಂಧಗಳನ್ನು ನೆಲೆಗೊಳಿಸುವುದು.

4) ಉತ್ತಮ ವ್ಯಾಪಾರ ಕರಾರುಗಳ ಸ್ಥಾಪನೆ.

ಕೃಷಿ ವಲಯದ ಮತ್ತು ಕೈಗಾರಿಕಾ ವಲಯದ ಸರಕುಗಳ ನಡುವೆ ನ್ಯಾಯಬದ್ಧವಾದ ಮತ್ತು ಉತ್ತಮವಾದ ವ್ಯಾಪಾರದ ಕರಾರುಗಳನ್ನು ಸ್ಥಾಪಿಸುವುದು.

5) ಉತ್ಪಾದಕರ ಬೆಲೆಗಳ ಮತ್ತು ಅನುಭೋಗಿಗಳ ಬೆಲೆಗಳ ನಡುವೆ ಅಂತರ ಕಡಿಮೆ ಮಾಡುವುದು.

ಉತ್ಪಾದಕರ ಮತ್ತು ಅನುಭೋಗಿಗಳ ಆರ್ಥಿಕ ಹಿತಾಸಕ್ತಿಗಳ ನಡುವೆ ಸಮತೋಲನವನ್ನು ಸಾಧಿಸುವುದು ಅಂದರೆ ಉತ್ಪಾದಕರ ಬೆಲೆಗಳ ಮತ್ತು ಅನುಭೋಗಿಗಳ ಬೆಲೆಗಳ ನಡುವಿನ ಅಂತರ ಕಡಿಮೆ ಮಾಡುವುದು.

6) ಸಾರ್ವತ್ರಿಕ ಬೆಲೆಯ ಮಟ್ಟದ ಹತೋಟಿ

ಕೃಷಿ ಉತ್ಪನ್ನಗಳ ಬೆಲೆಗಳಲ್ಲಿ ಸ್ಥಿರತೆಯನ್ನು ಸಾಧಿಸುವ ಮುಖಾಂತರ ಸಾರ್ವತ್ರಿಕ ಬೆಲೆಗಳ ಮಟ್ಟವನ್ನು ಹತೋಟಿಯಲ್ಲಿಡುವುದು.

7) ಮಾರುಕಟ್ಟೆ ಯೋಗ್ಯ ಹೆಚ್ಚುವರಿಯ ಪ್ರಮಾಣವನ್ನು ಅಧಿಕಗೊಳಿಸುವುದು.

ಕೃಷಿ ಉತ್ಪನ್ನಗಳಿಗೆ ನ್ಯಾಯೋಚಿತವಾದ ಬೆಲೆಗಳನ್ನು ದೊರಕಿಸಿಕೊಡುವ ಮೂಲಕ ಮಾರುಕಟ್ಟೆ ಯೋಗ್ಯ ಹೆಚ್ಚುವರಿಯ ಪ್ರಮಾಣವನ್ನು ಅಧಿಕಗೊಳಿಸುವುದು.

8) ನಿರಂತರ ರಫ್ತಿಗೆ ಪ್ರೋತ್ಸಾಹ :

ದೇಶದ ವಿವಿಧ ಪ್ರದೇಶಗಳ ನಡುವೆ ಉತ್ಪನ್ನಗಳ ಬೆಲೆಯಲ್ಲಿ ಸಮಾನತೆಯನ್ನು ತರುವ ಮೂಲಕ ಮಾರುಕಟ್ಟೆಯೋಗ್ಯ ಹೆಚ್ಚುವರಿ ಮತ್ತು ಕೃಷಿ ಉತ್ಪನ್ನಗಳ ರಫ್ತು ನಿರಂತರವಾಗಿರುವಂತೆ ಗಮನವಹಿಸುವುದು.

9) ಆಧುನಿಕ ಬೇಸಾಯ ಪದ್ಧತಿಗೆ ಪ್ರೇರಣೆ ನೀಡುವಿಕೆ

ಬೆಂಬಲ ಬೆಲೆಯು ಲಾಭದಾಯಕವಾದಲ್ಲಿ ಉತ್ತೇಜಕವಾಗುವ ಮೂಲಕ ಆಧುನಿಕ ಬೇಸಾಯ ಪದ್ಧತಿಗೆ ಪ್ರೇರಣೆ ನೀಡುವುದು ಮತ್ತು ಸಾಗುವಳಿದಾರರ ಹಿತಾಸಕ್ತಿಯನ್ನು ರಕ್ಷಿಸುವುದು.

10) ಉತ್ಪನ್ನಗಳ ಮತ್ತು ಹೂಡುವಳಿಗಳ ನಡುವಿನ ಸರಿಯಾದ ಬೆಲೆ ಸಂಬಂಧ ಸ್ಥಾಪನೆ :

ಸಾಗುವಳಿದಾರರು ಉತ್ಪಾದಿಸುವ ಸರಕುಗಳ ಮತ್ತು ಅವರಿಗೆ ಅಗತ್ಯವಿರುವ ಹೂಡುವಳಿಗಳ ನಡುವೆ ಸರಿಯಾದ ಬೆಲೆ ಸಂಬಂಧವನ್ನು ಸ್ಥಾಪಿಸುವುದು.

# ಆಹಾರಧಾನ್ಯಗಳಿಗೆ ಸಂಬಂಧಿಸಿದಂತೆ ಬೆಲೆ ನೀತಿ

ಆಹಾರಧಾನ್ಯಗಳ ಬೆಲೆಗಳು ಇಡೀಯ ರಾಷ್ಟ್ರದಲ್ಲಿನ ಬೆಲೆಗಳ ರಚನೆಯಲ್ಲಿ ಮಹತ್ವದ ಪಾತ್ರವನ್ನು ನಿರ್ವಹಿಸುತ್ತವೆ. ಆಹಾರ ಧಾನ್ಯಗಳ ಬೆಲೆಗಳು ಗಮನಾರ್ಹವನ್ನು ಏರಿದಾಗ ಹೆಚ್ಚಿಸಬೇಕಾಗುತ್ತವೆ ಮತ್ತು ಇದರ ಪರಿಣಾಮವಾಗಿ ಉತ್ಪಾದನಾ ವೆಚ್ಚವು ಅಧಿಕಗೊಳ್ಳುತ್ತದೆ. ತಯಾರಿಕಾ ಸರಕುಗಳ ಬೆಲೆಗಳನ್ನು ಹೆಚ್ಚಿಸುವ ಮುಖಾಂತರ ಮಾತ್ರ ಏರುತ್ತಿರುವ ಉತ್ಪಾದನ ವೆಚ್ಚವನ್ನು ಸರಿದೂಗಿಸಲು ಸಾಧ್ಯವಾಗುತ್ತವೆ. ಬೇರೆ ರೀತಿಯಲ್ಲಿ ಹೇಳುವುದಾದರೆ, ಆಹಾರಧಾನ್ಯಗಳ ಬೆಲೆಗಳ ಏರಿಕೆಯು ಜೀವನ ವೆಚ್ಚದ ಮತ್ತು ತಯಾರಿಕೆಯ ಸರಕುಗಳ ಬೆಲೆಯು ಹೆಚ್ಚಳಕ್ಕೆ ಕಾರಣವಾಗುವ ಮೂಲಕ ಗಂಭೀರವಾದ ಪರಿಣಾಮಗಳಿಗೆ ಕಾರಣವಾಗುತ್ತದೆ.

ಆಹಾರಧಾನ್ಯಗಳು ಅತ್ಯಾವಶ್ಯಕ ಸರಕುಗಳಾಗಿರುವುದೇ ಈ ವಿದ್ಯಮಾನಕ್ಕೆ ಕಾರಣವಾಗಿದೆ. ಈ ಸರಕುಗಳ ಬೆಲೆಗಳು ಎಷ್ಟೇ ಹೆಚ್ಚಿದರೂ ಸಹ ಅವು ಜೀವನಾವಶ್ಯಕ ಸರಕುಗಳಾಗಿರುವುದರಿಂದ ಅವುಗಳನ್ನು ಕಡಿಮೆ ಇಲ್ಲದಂತೆ ಮತ್ತು ನಾವು ಅಷ್ಟೇ ಪ್ರಮಾಣದಲ್ಲಿ ಖರೀದಿಸಲೇಬೇಕಾಗಿರುತ್ತದೆ. ಆಹಾರವಸ್ತುಗಳ ಬೆಲೆಗಳ ಏರಿಕೆಯೊಡನೆ ಇತರ ಸರಕುಗಳ ಬೆಲೆಗಳೂ ಸಹ ಅಧಿಕಗೊಳ್ಳುವ ಮತ್ತು ಜೀವನ ವೆಚ್ಚವು ಬಗ್ಗುಲಗೊಳ್ಳುವ ವಿದ್ಯಮಾನದ ಬೆಲೆಗಳೂ ಸಹ ಅಧಿಕಗೊಳ್ಳುವ ಮತ್ತು ಜೀವನ ಬೆಲೆ ವರ್ತುಲವು ಸೃಷ್ಟಿಯಾಗುತ್ತದೆ.

ಎರಡನೆಯ ಮಹಾಯುದ್ಧದ ಅವಧಿಯಲ್ಲಿ ಮತ್ತು ಯುದ್ಧೋತ್ತರ ಅವಧಿಯಲ್ಲಿ ಆಹಾರಧಾನ್ಯಗಳ, ಇತರ ಕೃಷಿ ಉತ್ಪನ್ನಗಳ ಮತ್ತು ಕೈಗಾರಿಕಾ ಸರಕುಗಳ ಬೆಲೆಗಳನ್ನು ಸರ್ಕಾರವೇ ನಿಯಂತ್ರಿಸಿತು. ಆ ಮೂಲಕ, ಅನುಭೋಗಿಗಳ ಕೊಳ್ಳುವ ಶಕ್ತಿಯು ಮಿತಿಯನ್ನು ಮೀರಿ ಇಲ್ಲ ಹೆಚ್ಚದಂತೆ ಸರ್ಕಾರವು ಕ್ರಮವನ್ನು ಅನುಸರಿಸಿತು.

ಪ್ರಮುಖ ಆಹಾರಧಾನ್ಯಗಳಾದ ಅಕ್ಕಿ, ಗೋಧಿ, ಜೋಳ ಸಜ್ಜೆ ಮತ್ತು ನವಣೆಗೆ ಸಂಬಂಧಿಸಿದಂತೆ ಸರ್ಕಾರವು ಮೂರು ರೀತಿಗಳ ಬೆಲೆಗಳನ್ನು ನಿಗದಿಗೊಳಿಸುವ ನಿಯಮವನ್ನು ಅನುಸರಿಸುತ್ತದೆ. ಈ ಬೆಲೆಗಳು ಯಾವುದೆಂದರೆ,

i) ಬೆಂಬಲ ಬೆಲೆ
ii) ಸಂಗ್ರಹಣಾ ಬೆಲೆ
iii) ಮಾರಾಟ ಬೆಲೆ

1) ಬೆಂಬಲ ಬೆಲೆ :-

ಕುಸಿಯುತ್ತಿರುವ ಬೆಲೆಗಳ ಕಾರಣದಿಂದ ಸಂಭವಿಸುವ ನಷ್ಟದಿಂದ ಉತ್ಪಾದಕರನ್ನು ರಕ್ಷಿಸಲು ಬೆಂಬಲ ಬೆಲೆಗಳನ್ನು ನೀಡಲಾಗುತ್ತದೆ. ಸಮೃದ್ಧ ಬೆಳೆಯಾದ ಸಮಯದಲ್ಲಿ ಕೃಷಿ ಉತ್ಪನ್ನಗಳ ಬೆಲೆಗಳು ಇಳಿಯುವುದು ಸಹಜ. ಆಗ ಉತ್ಪಾದಕರು ನಷ್ಟವನ್ನು ಅನುಭವಿಸುವ ಅಥವಾ ಅತ್ಯಲ್ಪ ಪ್ರಮಾಣದ ಲಾಭವನ್ನು ಸಂಪಾದಿಸುವ ಪರಿಸ್ಥಿತಿ ತಲೆದೋರುತ್ತದೆ.

ಆಹಾರಧಾನ್ಯಗಳು ಜೀವನಾತ್ಮಕ ವಸ್ತುಗಳಾಗಿರುವುದರಿಂದ ಅವುಗಳ ಬೆಲೆಗಳಿಗೆ ಸಂಬಂಧಿಸಿದಂತೆ ಒಂದು ವಿಚಿತ್ರವಾದ ಪರಿಸ್ಥಿತಿಯು ನೆಲೆಸಿರುತ್ತದೆ. ಇವುಗಳು ಅತ್ಯಾವಶ್ಯಕ, ಸಂಬಂಧಿಸಿದಂತೆ ಒಂದು ವಿಚಿತ್ರವಾದ ಪರಿಸ್ಥಿತಿಯು ನೆಲೆಸಿರುತ್ತವೆ. ಇವುಗಳು ಸರಕುಗಳಾಗಿರುವ ಕಾರಣದಿಂದ ಸಾಧ್ಯವಾದಷ್ಟು ಕಡಿಮೆ ಬೆಲೆಯಲ್ಲಿ ಇವುಗಳನ್ನು ಅನುಭೋಗಿಗಳಿಗೆ ಒದಗಿಸಬೇಕಾಗಿರುತ್ತದೆ. ಅದರಲ್ಲಿಯೂ ಜನಸಾಮಾನ್ಯರಿಗೆ ಮತ್ತು ಕಡಿಮೆ ಆದಾಯವಂತರಿಗೆ ಈ ಸರಕುಗಳನ್ನು ಕನಿಷ್ಠ ಬೆಲೆಯಲ್ಲಿ ಪೂರೈಕೆ ಮಾಡಬೇಕಾದ ಅವಶ್ಯಕತೆ ಇರುತ್ತದೆ. ಆದರೆ ಆಹಾರಧಾನ್ಯಗಳನ್ನು ಉತ್ಪಾದಿಸುವವರು ರೈತವರ್ಗದ

ಜನರಾಗಿರುವುದರಿಂದ, ಈ ವಸ್ತುಗಳಿಗೆ ಸಾಕಷ್ಟು ಪ್ರಮಾಣದ ಬೆಲೆಯನ್ನು ದೊರಕಿಸಿಕೊಡದಿದ್ದರೆ ಉತ್ಪಾದಕರಿಗೆ ನಷ್ಟವಾಗುತ್ತದೆ. ಉತ್ಪನ್ನಗಳಿಗೆ ಯೋಗ್ಯ ಬೆಲೆಯು ಲಭಿಸದಿದ್ದರೆ ಮರು ಉತ್ಪಾದನೆಗೆ ಹಣಕಾಸಿನ ಕೊರತೆ ಸಂಭವಿಸುತ್ತದೆ ಮತ್ತು ಪ್ರೇರಣೆಯು ಮಾಯವಾಗುತ್ತದೆ. ಆದ್ದರಿಂದ ಒಂದು ಕಡೆ ಆಹಾರಧಾನ್ಯಗಳ ಉತ್ಪಾದಕರಿಗೆ ಯೋಗ್ಯ ಬೆಲೆಯನ್ನು ದೊರಕಿಸಿಕೊಡುವ ಮತ್ತು ಇನ್ನೊಂದು ಕಡೆ ಈ ವಸ್ತುಗಳನ್ನು ಸಾಧ್ಯವಾದಷ್ಟು ಕಡಿಮೆ ಬೆಲೆಯಲ್ಲಿ ಅನುಭೋಗಿಗಳಿಗೆ ಒದಗಿಸಬೇಕಾದ ಸಮಸ್ಯೆಗಳು ಎದುರಾಗುತ್ತದೆ. ಈ ಸಮಸ್ಯೆಗಳನ್ನು ಬಹಳ ಜಾಣ್ಮೆಯಿಂದ ನಿರ್ವಹಿಸಬೇಕಾಗಿರುತ್ತದೆ.

## ೨. ಸಂಗ್ರಹಣ ಬೆಲೆ :-


ಕೊರತೆಯ ಸಮಯದಲ್ಲಿ ಮುಕ್ತ ಮಾರುಕಟ್ಟೆಯಲ್ಲಿ ಆಹಾರಧಾನ್ಯಗಳ ಬೆಲೆಗಳು ಬಹಳ ಹೆಚ್ಚಾಗಿರುತ್ತದೆ. ಇಂತಹ ಪರಿಸ್ಥಿತಿಗಳಲ್ಲಿ ಕಡಿಮೆ ಆದಾಯವಂತರಾದ ಮತ್ತು ಬಡವರ್ಗಗಳ ಜನರಿಗೆ ತೀವ್ರವಾದ ತೊಂದರೆಗಳು ಸಂಭವಿಸುತ್ತದೆ. ಬಡವರ್ಗಗಳ ಜನರಿಗೆ ಆಹಾರವಸ್ತುಗಳನ್ನು ಕಡಿಮೆ ಬೆಲೆಯಲ್ಲಿ ದೊರಕಿಸಿ ಕೊಡಲು ಹಾಗೂ ಅನುಭೋಗಿಗಳ ಮಟ್ಟದಲ್ಲಿ ಬೆಲೆಗಳನ್ನು ಸ್ಥಿರಗೊಳಿಸಲು ಸರ್ಕಾರವು ಸಾರ್ವಜನಿಕ ವಿತರಣೆಯ ಪದ್ಧತಿಯನ್ನು ಅನುಸರಿಸುತ್ತದೆ.

ಈ ನೀತಿಯ ಸಾರ್ವಜನಿಕ ವಿತರಣೆ ಪದ್ಧತಿಯಲ್ಲಿ ನ್ಯಾಯಬೆಲೆ ಅಂಗಡಿಗಳ ಮೂಲಕ ಪಡಿತರ ವ್ಯವಸ್ಥೆಯಲ್ಲಿ ಆಹಾರವಸ್ತುಗಳನ್ನು ವಿತರಣೆ ಮಾಡಲು ಸರಕಾರವು ಮೊದಲೇ ದಾಸ್ತಾನುಗಳನ್ನು ಸಂಗ್ರಹಿಸಿಟ್ಟುಕೊಳ್ಳಬೇಕಾಗಿರುತ್ತದೆ. ಮುಕ್ತ ಮಾರುಕಟ್ಟೆಯ ಮೂಲಕ ದಾಸ್ತಾನುಗಳನ್ನು ಸಂಗ್ರಹಿಸುವಿಕೆಯು ಒಂದು ಮುಖ್ಯ ವಿಧಾನವಾಗಿದೆ. ಸರಕಾರವು ಮಾರುಕಟ್ಟೆ ಬೆಲೆಗಳಿಗಿಂತ ಹೆಚ್ಚಿನ ಬೆಲೆಯನ್ನು ಉತ್ಪಾದಕರಿಗೆ ನೀಡಿದಾಗ ಮಾತ್ರ ದಾಸ್ತಾನುಗಳನ್ನು ಸಂಗ್ರಹಿಸಲು ಸಾಧ್ಯವಾಗುತ್ತದೆ. ಆದರೆ ಹೀಗೆ ಮಾಡುವುದರಿಂದ ಆಹಾರವಸ್ತುಗಳ ಬೆಲೆಗಳು ಅನಿವಾರ್ಯವಾಗಿ ಅಧಿಕಗೊಳ್ಳುತ್ತದೆ. ಆದರೆ ಹೀಗೆ ಮಾಡುವುದರಿಂದ ಆಹಾರವಸ್ತುಗಳ ಬೆಲೆಗಳು ಅನಿವಾರ್ಯವಾಗಿ ~~ಕಡಿ~~ ಅಧಿಕಗೊಳ್ಳುತ್ತದೆ.

## 3. ಮಾರಾಟ ಬೆಲೆ :-

ಆಹಾರಧಾನ್ಯಗಳನ್ನು ಮತ್ತು ಇತರ ಆಹಾರ ವಸ್ತುಗಳನ್ನು ಪಡಿತರ ಅಂಗಡಿಗಳಿಗೆ ಮತ್ತು ನ್ಯಾಯ ಬೆಲೆ ಅಂಗಡಿಗಳಿಗೆ ಮಾರಾಟ ಬೆಲೆಗಳಲ್ಲಿ ನೀಡಲಾಗುತ್ತವೆಯೋ ಆ ಬೆಲೆಗಳಿಗೆ ಮಾರಾಟ ಬೆಲೆಗಳು ಎಂದು ಹೆಸರು. ಸರಕಾರವು ನಿಗದಿಪಡಿಸಿದ ಬೆಲೆಗಳಲ್ಲಿ ಈ ಅಂಗಡಿಗಳು ಆಹಾರ ವಸ್ತುಗಳನ್ನು ಮಾರಾಟ ಮಾಡುತ್ತವೆ. ಕಡಿಮೆ ಆದಾಯದ ವರ್ಗಗಳ ಜನರ ಹಿತಾಸಕ್ತಿಗಳನ್ನು ಕಾಪಾಡಲು ಈ ನೀತಿಯನ್ನು ಅನುಸರಿಸಲಾಗುತ್ತದೆ.




**Coordinator IQAC**
G. P. PORWAL ARTS, COM &
V. V. SALIMATH Sc. College,
SINDGI-586128.

**Principal,**
G. P. Porwal Arts, Comm &
V. V. Salimath Sc. College
SINDGI-586128. College Code: 5234